ಇ) ಈ ರಸ್ತೆಗಳ ದುರಸ್ತಿಗಾಗಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿರುತ್ತದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ತುರುವೇಕೆರೆ ಮತ ಕ್ಷೇತ್ರದಲ್ಲಿನ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ಕೆಲವು ರಸ್ತೆಗಳ ಹಲವು ಭಾಗಗಳು ಇತ್ತೀಚೆಗೆ ಹಾಳಾಗಿರುವುದು ಗಮನಕ್ಕೆ ಬಂದಿದೆ.

ಆ) ತುರುವೇಕೆರೆ ಕ್ಷೇತ್ರದಲ್ಲಿನ ರಾಜ್ಯ ಹೆದ್ದಾರಿಯ ಅಭಿವೃದ್ಧಿ: ದುರಸ್ತಿ ಕೆಲಸವನ್ನು ಕರ್ನಾಟಕ ರಾಜ್ಯ ಹೆದ್ದಾರಿ ಅನುಷ್ಠಾನ ಯೋಜನೆಯು ಕೈಗೊಂಡಿದೆ. ಉಳಿದಂತೆ ಇರುವ ಜಿಲ್ಲಾ ಮುಖ್ಯ ರಸ್ತೆಗಳ ಡಾಂಬರು ಮೇಲ್ಪೈನ ಗುಂಡಿಗಳನ್ನು ಮುಚ್ಚುವ ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆ ಕೈಗೊಂಡಿದ್ದು, ಶೀಘ್ರ ಕ್ರಮ ಕೈಗೊಳ್ಳಲಾಗುವುದು.

ಇ) ಪ್ರಸಕ್ತ ಜಿಲ್ಲಾ ಮುಖ್ಯ ರಸ್ತೆಗಳ ಡಾಂಬರು ಮೇಲ್ಪೈನಲ್ಲಿನ ಗುಂಡಿಗಳನ್ನು ಮುಚ್ಚಿ ದುರಸ್ತಿಗೊಳಿಸಲು ರೂ. 13.00 ಲಕ್ಷ ಅಂದಾಜು ಮಾಡಲಾಗಿರುತ್ತದೆ. ಸದ್ಯದಲ್ಲಿಯೇ ಈ ಕಾಮಗಾರಿಯನ್ನು ಪೂರೈಸಲಾಗುವುದು.

574(827) : ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಾವೇರಿ ಕಣಿವೆಯಲ್ಲಿ ಬಾಕಿ ಇರುವ ನೀರಾವರಿ ಯೋಜನೆಗಳು ಯಾವುವು;

ಆ) ಕಾವೇರಿ ನಿಗಮ ಅಸ್ತಿತ್ವಕ್ಕೆ ಬಂದ ದಿನದಿಂದ ಈ ಯೋಜನೆಗಳನ್ನು ಪೂರ್ಣಗೊಳಿಸಲು ಕೈಗೊಂಡಿರುವ ಕ್ರಮಗಳೇನು;

ಇ) ಈ ಯೋಜನೆಗಳು ಪೂರ್ಣವಾಗಲು ಬೇಕಾಗಿರುವ ಒಟ್ಟು ಹಣವೆಷ್ಟು (ಯೋಜನಾವಾರು ವಿವರಗಳನ್ನು ಒದಗಿಸುವುದು)

ಈ) ಈ ಮೊಬಲಗನ್ನು ಯಾವ ರೀತಿ ಕ್ರೋಢೀಕರಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಡಿ.ಡಿ. ಅರಸ್ ನಾಲೆ ಕುಣಿ, ಹಾರಂಗಿ, ಅರ್ಕಾವತಿ, ತಾರಕ ಏತ ನೀರಾವರಿ ಯೋಜನೆ, ಉಡುತೊರೆಹಳ್ಳ, ಇಗ್ಗಲೂರು, ಮಂಚನಬೆಲೆ, ನಂಜಾಪುರ ಏತ ನೀರಾವರಿ, ಹೇಮಾವತಿ, ಯಗಚಿ, ಕಾಮಸಮುದ್ರ ಏತ ನೀರಾವರಿ, ಹುಚ್ಚನಕೊಪ್ಪಲು ಏತ ನೀರಾವರಿ, ಕಾಚೇನಹಳ್ಳಿ ಏತ ನೀರಾವರಿ.

ಆ) ಕಾವೇರಿ ನೀರಾವರಿ ನಿಗಮವು ಜೂನ್ 2003ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು ಈ ಯೋಜನೆಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸುವ ಉದ್ದೇಶದಿಂದ ಒಟ್ಟು ರೂ. 1500.00 ಕೋಟಿಗಳ ಬಂಡವಾಳವನ್ನು ಕ್ರೋಢೀಕರಿಸುವ ಗುರಿಯನ್ನು ಹೊಂದಿದ್ದು 2003-04ನೇ ಸಾಲಿನಲ್ಲಿ ರೂ.250.00 ಕೋಟಿಗಳನ್ನು ಸಂಗ್ರಹಿಸಲು ಸರ್ಕಾರ ಅನುಮೋದನೆ ನೀಡಿದ್ದು, ಅದರಂತೆ ಕಾಮಗಾರಿ ಕೈಗೊಳ್ಳಲಾಗಿದೆ. ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ, 2004-05ನೇ ಸಾಲಿಗೆ ರೂ.200.00 ಕೋಟಿಗಳನ್ನು ಸಂಗ್ರಹಿಸಲು ಸರ್ಕಾರದಿಂದ ಅನುಮೋದನೆ ನೀಡಲಾಗಿದೆ. ಅದರಂತೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಇ) ಈ ಯೋಜನೆಗಳನ್ನು ಪೂರ್ಣಗೊಳಿಸಲು ಸುಮಾರು ರೂ. 5000.00 ಕೋಟಿಗಳ ಅವಶ್ಯಕತೆ ಇರುತ್ತದೆ. ಯೋಜನಾವಾರು ವಿವರ ಲಗತ್ತಿಸಿದೆ.

ಈ) ಸರ್ಕಾರವು ನೀಡುವ ಭದ್ರತೆಯ ಮೇರೆಗೆ ಯೋಜನೆಗಳನ್ನು ಪೂರ್ಣಗೊಳಿಸಲು ಶೇರು ಬಂಡವಾಳದ ಮೂಲಕ ಕ್ರೋಡೀಕರಿಸಲಾಗುವುದು.

575(828) : ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಇತ್ತೀಚೆಗೆ ತುರುವೇಕೆರೆಯ ಯಂ. ಬೇವಿನಹಳ್ಳಿಯಲ್ಲಿ ಮತ್ತು ಸಂಗಲಾಪುರದಲ್ಲಿನ ವಿದ್ಯುತ್ ತಂತಿಯು ಸ್ಪರ್ಷದಿಂದಾದ ಘಟನೆಯಲ್ಲಿ ಮಡಿದವರಿಗೆ ಮತ್ತು ಗಾಯಗೊಂಡಿರುವವರಿಗೆ ಸರ್ಕಾರ ನೀಡಿದ ಪರಿಹಾರವೆಷ್ಟು;

ಆ) ಇದಕ್ಕೆ ಕಾರಣಕರ್ತರಾದವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ದಿನಾಂಕ 23-5-2004ರಂದು ಎಂ. ಬೇವಿನಹಳ್ಳಿಯ ಹತ್ತಿರವಿರುವ ಎಂ. ಗಂಗಂನಹಳ್ಳಿ ಗ್ರಾಮದಲ್ಲಿ ನೀರಾವರಿ ಪಂಪುಸೆಟ್ಟಿನ ಸೆಕೆಂಡರಿ ಮಾರ್ಗದ ವಿದ್ಯುತ್ ವಾಹಕದ ಮೇಲೆ ತೆಂಗಿನ ಗರಿ ಬಿದ್ದು ವಾಹಕವು ಮುಳ್ಳು ಬೇಲಿಯ ಮೇಲೆ ಕಡಿದು ಬಿದ್ದು, ಮುಳ್ಳು ತಂತಿಯಲ್ಲಿ ವಿದ್ಯುತ್ ಪ್ರವಹಿಸಿ, ಆಕಸ್ಮಿಕವಾಗಿ ಶ್ರೀಮತಿ ಲಕ್ಷ್ಮಿದೇವಮ್ಮ ಎಂಬುವವರು ಮುಳ್ಳು ತಂತಿ ಬೇಲಿಯನ್ನು ಸ್ಪರ್ಶಿಸಿ ಮರಣ ಹೊಂದಿರುತ್ತಾರೆ. ದಿನಾಂಕ 27-7-2004 ರಂದು ಪ್ರಧಾನ ವ್ಯವಸ್ಥಾಪಕರು, ತುಮಕೂರು ಇವರು ಒಂದು ಲಕ್ಷ ರೂ.ಗಳ ಪರಿಹಾರ ಧನವನ್ನು ಮಂಜೂರು ಮಾಡಿರುತ್ತಾರೆ.

ದಿನಾಂಕ 28-5-2004ರಂದು ಸಂಗಲಾಪುರ ಊರಿನ ಸಮೀಪ ಸೆಕೆಂಡರಿ ಮಾರ್ಗದ ತಂತಿಯೊಂದು ಕಡಿದು ನೆಲದ ಮೇಲೆ ಬಿದ್ದಿದ್ದು ಸಚಿನ ಕುಮಾರ್ ಎಂಬ 6 ವರ್ಷದ ಬಾಲಕ ಆಕಸ್ಮಿಕವಾಗಿ ವಿದ್ಯುತ್ ತಂತಿ ಸ್ಪರ್ಶಿಸಿದಾಗ ಕೈ ಬೆರಳುಗಳು ಸುಟ್ಟಿರುತ್ತದೆ. ಈ ಬಾಲಕನಿಗೆ ರೂ.11,000/ ಗಳ ಪರಿಹಾರ ಧನವನ್ನು ನೀಡಲು ಕ್ರಮ ತೆಗೆದುಕೊಳ್ಳಲಾಗಿದೆ.

ಆ) ವರದಿಗಳನ್ನು ಆಧರಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು.

576(829) : ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ವಿದ್ಯುತ್ ಸಂಪರ್ಕಕ್ಕೆ ಸಂಬಂಧಿಸಿದ ಸಲಕರಣೆಗಳಾದ ಪರಿವರ್ತಕಗಳು ಮತ್ತು ಹೆಚ್ಚುವರಿ ಪರಿವರ್ತಕಗಳು ಸಿಮೆಂಟ್ ಕಂಬಗಳು ಮುಂತಾದವುಗಳನ್ನು ಸರಬರಾಜು ಮಾಡದೇ ಇರುವುದರಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಈ ದಿಶೆಯಲ್ಲಿ ಕೈಗೊಂಡ ಕ್ರಮಗಳೇನು;

ಇ) ಸಂಪಿಗೆ, ಶೆಟ್ಟಿಗೊಂಡನಹಳ್ಳಿ, ವಿಠಲಾಪುರಗಳಲ್ಲಿ ಉಪ ಸಬ್‌ಸ್ಟೇಷನ್ ತೆರೆಯುವುದರ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)